ಓ.ಎಸ್. ನಂಃ 564/2022

ಡಿ.ಡಬ್ಲ್ಯೂಃ 1

**ದಿನಾಂಕ 01.08.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ವಾದಿಯ ಪರ ಃ ಶ್ರೀ.ಎಸ್.ಹೆಚ್.ಎಲ್ ವಕೀಲರಿಂದಃ</u>**

1. ನಾನು ಅವಿದ್ಯಾವಂತನಾಗಿರುತ್ತೇನೆ. ಯಾವ ಪರಿಹಾರ ಕೋರಿ ವಾದಿಯು ಈ ದಾವೆಯನ್ನು ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇದೆ. ದಾವಾ ಆಸ್ತಿಯನ್ನು 3 ರಿಂದ ನೇ ಪ್ರತಿವಾದಿಯರು ನಿಪಿ-1 ರಡಿಯಲ್ಲಿ ವಾದಿಗೆ ಮಂಜೂರು ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯು ಮಂಜೂರಾದಾಗಿನಿಂದ ಇಲ್ಲಿಯವರೆಗೂ ವಾದಿಯೇ ದಾವಾ ಆಸ್ತಿಯ ಸಂಬಂಧ ಕಂದಾಯ ಪಾವತಿಸಿ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

2. ವಾದಿಯೇ ದಾವಾ ಆಸ್ತಿಯ ಮಾಲಿಕರಾಗಿರುತ್ತಾರೆ ಎಂದರೆ ಸರಿಯಲ್ಲ. ಕೊಡಿಯಾಲ ಗ್ರಾಮದ ಸರ್ವೇ ನಂಬರ್ 115 ಇದು ಸರ್ಕಾರಿ ಗೋಮಾಳ ಜಮೀನಾಗಿತ್ತು ಎಂದರೆ ಸರಿ. ಸರ್ವೇ ನಂಬರ್ 115 ರ ಒಟ್ಟು ವಿಸ್ತೀರ್ಣ 106 ಎಕರೆ 25 ಗುಂಟೆ ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸರ್ವೇ ನಂಬರ್ 115 ರಲ್ಲಿ ನನಗೆ ಸೇರಿದ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸರ್ವೇ ನಂಬರ್ 115 ರ ಜಮೀನು ಸರ್ವೇ ನಂಬರ್ 150 ಎಂದು ಮಾರ್ಪಾಡಾಗಿರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ.

3. ಸರ್ವೇ ನಂಬರ್ 115 ರಲ್ಲಿ ಸರ್ಕಾರವು 72 ನಿವೇಶನಗಳನ್ನು ರಚಿಸಿ ಭೂ ರಹಿತ ಬಡವರಿಗೆ ಸದರಿ ನಿವೇಶನಗಳನ್ನು ಹಂಚಿಕೆ ಮಾಡಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಅದರ ಪ್ರಕಾರ ದಾವಾ ಆಸ್ತಿಯನ್ನು ಸರ್ಕಾರವು

ವಾದಿಗೆ ಮಂಜೂರು ಮಾಡಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

4. ದ್ಯಾವಯ್ಯ ಬಿನ್ ಜವರಯ್ಯ ರವರ ಹೆಸರಿನಲ್ಲಿ ಇದ್ದ ಪಹಣಿ ಮತ್ತು ಎಮ್.ಆರ್ ದಾಖಲೆಗಳನ್ನು ನೋಡಿದ ಬಳಿಕ ಕೊಡಿಯಾಲ ಗ್ರಾಮದ ಸರ್ವೇ ನಂಬರ್ 150 ರಲ್ಲಿ 1 ಎಕರೆ 20 ಗುಂಟೆ ಜಮೀನನ್ನು ಖರೀದಿಸಿರುತ್ತೇನೆ. ಕೊಡಿಯಾಲ ಗ್ರಾಮದ ಸರ್ವೇ ನಂಬರ್ 115 ಹಾಗೂ ಸರ್ವೇ ನಂಬರ್ 150 ಇವೆರಡೂ ಬೇರೆ ಬೇರೆ ಜಮೀನುಗಳು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕೊಡಿಯಾಲ ಗ್ರಾಮದ ಸರ್ವೇ ನಂಬರ್ 115 ರ ಜಮೀನು ಹೊಸದಾಗಿ ಪೋಡು ಆಗಿ ಸರ್ವೇ ನಂಬರ್ 150 ಎಂದು ಆಗಿರುತ್ತದೆ ಎಂದು ಸಾಕ್ಷಿಯು ಸ್ವತಃ ನುಡಿದಿರುತ್ತಾರೆ.

5. ಕೊಡಿಯಾಲ ಗ್ರಾಮದ ಸರ್ವೇ ನಂಬರ್ 115 ರ ಜಮೀನು ಹೊಸದಾಗಿ ಪೋಡು ಆಗಿ ಸರ್ವೇ ನಂಬರ್ 150 ಎಂದು ಆಗಿರುತ್ತದೆ ಎಂದು ತೋರಿಸಲು ನಾನು ಪೋಡು ದುರಸ್ತಿಯಾದ ಆದೇಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ್ 150 ರ ಆಸ್ತಿಯು ಮಾರಾಟಗಾರನಾದ ದ್ಯಾವಯ್ಯ ಬಿನ್ ಜವರಯ್ಯ ರವರಿಗೆ ಯಾವ ರೀತಿಯಲ್ಲಿ ಬಂತು ಎಂದು ನನಗೆ ಗೊತ್ತಿಲ್ಲ ಬಹುಶಃ ಸದರಿ ಆಸ್ತಿ ದ್ಯಾವಯ್ಯ ರವರಿಗೆ ದರಕಾಸ್ತು ಮೂಲಕ ಬಂದಿರಬಹುದು ಎಂದು ಸಾಕ್ಷಿಯು ನುಡಿದಿರುತ್ತಾರೆ. ಸರ್ವೇ ನಂಬರ್ 150 ರ ಆಸ್ತಿಯು ದ್ಯಾವಯ್ಯ ಬಿನ್ ಜವರಯ್ಯ ರವರಿಗೆ ದರಕಾಸ್ತು ಮೂಲಕ ಬಂದಿರುತ್ತದೆ ಎಂದು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

6. ಸರ್ವೇ ನಂಬರ್ 150 ರ ಆಸ್ತಿಯು ಎಲ್ಲಿ ಇರುತ್ತದೆ ಹಾಗೂ ಸದರಿ ಆಸ್ತಿ ದ್ಯಾವಯ್ಯ ರವರಿಗೆ ಯಾವ ಮೂಲದಿಂದ ಬಂದಿರುತ್ತದೆ ಎಂದು ನನಗೆ ಗೊತ್ತಿರದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ರ ಕ್ರಯ ಪತ್ರವು ನಾನು ಸೃಷ್ಟಿಸಿರುವ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 115 ರ ಆಸ್ತಿಯು ನಾನು ಹೇಳಿದ ಹಾಗೆ ಎಂದಿಗೂ ಸಹ ಸರ್ವೇ ನಂಬರ್ 150 ಎಂದು ದುರಸ್ತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ್ 115 ಹಾಗೂ ಸರ್ವೇ

ನಂಬರ್ 150 ರ ಆಸ್ತಿಗಳು ಒಂದೇ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**